1660(1888) ಶ್ರೀ ಸುನೀಲ್ ಕುಮಾರ್ ವಿ. (ಕಾರ್ಕಳ) ಮಾನ್ಯ ಮುಖ್ಯ ಮಂತ್ರಿಗಳು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ;

ಅ. ಕಾರ್ಕಳ ತಾಲ್ಲೂಕ ಹೆಬ್ರಿ ಪೋಲೀಸ್ ಠಾಣೆಯಲ್ಲಿ ದಾಖಲಾದ 46/03 ಕೊಲೆ ಪ್ರಕರಣದ ತನಿಖೆ ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ. ಬಂದಿದ್ದಲ್ಲಿ, ವಿಳಂಬವಾಗಲು ಕಾರಣಗಳೇನು ತಿಳಿಸುವುದು;

ಇ. ಈ ಬಗ್ಗೆ ಶಂಕಿತ ಆರೋಪಿಗಳನ್ನು ವಿಚಾರಿಸಲಾಗಿದೆಯೇ; ಯಾವ ರೀತಿ ವಿಚಾರಣೆ ನಡೆಸಲಾಗಿದೆ ಮತ್ತು ಆರೋಪಿಗಳನ್ನು ಬಂಧಿಸಲು ತಡವಾಗಲು ಕಾರಣಗಳೇನು;

ಈ. ಈ ಪ್ರಕರಣದ ವಿಚಾರಣೆಯನ್ನು ಪೂರ್ಣಗೊಳಿಸಲು ಇನ್ನು ಎಷ್ಟು ಸಮಯ ಬೇಕಾಗುವುದು ತಿಳಿಸುವುದು ;

ಶ್ರೀ ಧರಂಸಿಂಗ್ (ಮುಖ್ಯ ಮಂತ್ರಿಗಳು) :

ಅ. ಈ ಪ್ರಕರಣ ಕು: ಸುಚಿತ ಶೆಟ್ಟಿ ಎಂಬುವಳ ಕೊಲೆಯ ಪ್ರಕರಣವಾಗಿದ್ದು, ಈ ಬಗ್ಗೆ ಕಾರ್ಕಳ ತಾಲ್ಲೂಕು ಹೆಬ್ರಿ ಪೋಲೀಸ್ ಠಾಣೆಯಲ್ಲಿ ಮೊಕದ್ದಮೆ ಸಂಖ್ಯೆ 46/03 ಕಲಂ 376, 302 ಮತ್ತು 201 ಐಪಿಸಿ ಪ್ರಕರಣ ದಾಖಲಾಗಿದೆ. ಇದರ ತನಿಖೆಯನ್ನು ಸಿಓಡಿ ಘಟಕವು ದಿನಾಂಕ 26–9–2003 ರಿಂದ ಮಾಡುತ್ತಿದೆ. ಪ್ರಾರಂಭದಲ್ಲಿ ಕುಮಾರಿ ಸುಚಿತ ಶೆಟ್ಟಿ ಕಾಣೆಯಾಗಿರುವ ಬಗ್ಗೆ ಪ್ರಕರಣ ದಾಖಲಾಗಿದ್ದು ತದನಂತರ ಆಕೆಯ ಶವವು ಹೆಬ್ರಿ ಬಳಿ ಇರುವ ಸೀತಾ ನದಿ ಬಳಿ ದೊರೆತಿದ್ದು, ಮರಣೋತ್ತರ ಪರೀಕ್ಷೆಯಿಂದ ಇದು ಕೊಲೆ ಪ್ರಕರಣವೆಂದು ಹೊರಪಟ್ಟಿದ್ದು ಆನಂತರ ಕೊಲೆ ಪ್ರಕರಣವೆಂದು ದಾಖಲಿಸಿ ತನಿಖೆ ಕೈಗೊಳ್ಳಲಾಗಿದೆ. ಸ್ಥಳೀಯ ಪೋಲೀಸರು 35 ಜನರನ್ನು ವಿಚಾರಿಸಿದ್ದು, ತದ ನಂತರ ಸಿ.ಓ.ಡಿ. ತನಿಖಾಧಿಕಾರಿಗಳು ಇಲ್ಲಿಯವರೆಗೆ 43 ಜನರನ್ನು ವಿಚಾರಿಸಿ ಹೇಳಿಕೆ ಪಡೆದುಕೊಂಡಿದ್ದಾರೆ. ಆದರೂ ಸಹ ಆರೋಪಿತರ ಬಗ್ಗೆ ಖಚಿತ ಸಾಕ್ಷ್ಯಾಧಾರಗಳು ಸಿಕ್ಕಿಲ್ಲ. ಪ್ರತ್ಯಕ್ಷ ಸಾಕ್ಷಿಯಾಗಲೀ ಮತ್ತು ಸಾಂದರ್ಭಿಕ ಸಾಕ್ಷಿಯಾಗಲೀ ಇಲ್ಲದಿರುವುದರಿಂದ ತನಿಖೆ ತ್ವರಿತಗತಿಯಲ್ಲಿ ಮುಗಿದಿಲ್ಲ. ಆದರೂ ಪ್ರಕರಣ ಪತ್ತೆ ಮಾಡಲು ಸತತ ಪ್ರಯತ್ನ ಮಾಡಲಾಗುತ್ತಿದೆ.

ಆ. ಈಗಾಗಲೇ ಪ್ರಶ್ನೆ 1ರಲ್ಲಿ ತಿಳಿಸಿರುವಂತೆ ಈ ಪ್ರಕರಣದಲ್ಲಿ ಆರೋಪಿತರಾರು ಎನ್ನುವ ಬಗ್ಗೆ ಇಲ್ಲಿಯವರೆಗೂ ಯಾವುದೇ ಸ್ಪಷ್ಟವಾದ ಸಾಕ್ಷ್ಯಾಧಾರಗಳು ದೊರಕಿರುವುದಿಲ್ಲ ಮತ್ತು ಕೃತ್ಯಕ್ಕೆ ಪ್ರತ್ಯಕ್ಷ ಸಾಕ್ಷಿ ಮತ್ತು ಸಾಂದರ್ಭಿಕ ಸಾಕ್ಷಿಗಳು ಇರುವುದಿಲ್ಲ. ಆದ್ದರಿಂದ ತನಿಖೆಯಲ್ಲಿ ವಿಳಂಬವಾಗಿದೆ.

ಇ. ಈ ಪ್ರಕರಣದಲ್ಲಿ ಇಬ್ಬರನ್ನು ಶಂಕಿಸಲಾಗಿದ್ದು, ಇವರಿಬ್ಬರನ್ನು ಕೂಲಂಕಷವಾಗಿ ವಿಚಾರ ಮಾಡಲಾಗಿದೆ. ಅವರಿಂದ ಯಾವುದೇ ಉಪಯುಕ್ತ ಮಾಹಿತಿಯು ದೊರೆತಿಲ್ಲ. ಆದಾಗ್ಯೂ ಇವರಿಬ್ಬರನ್ನು ವೈಜ್ಞಾನಿಕ ಪರೀಕ್ಷೆಗಳಾದ ಪಾಲಿಗ್ರಾಫ್ ಟೆಸ್ಟ್ ಮತ್ತು ಪಿ–300 ಪರೀಕ್ಷೆಗೆ ಒಳಪಡಿಸಲಾಗಿದ್ದು, ನಾರ್ಕೋ ಅನಾಲಿಸಿಸ್ ಪರೀಕ್ಷೆಗೆ ಒಳಪಡಿಸಬೇಕಾಗಿದೆ. ಇದಕ್ಕಾಗಿ ನ್ಯಾಯಾಲಯದ ಅನುಮತಿ ಪಡೆದಿದ್ದ ವಿಧಿ ವಿಜ್ಞಾನ ಪ್ರಯೋಗ ಶಾಲೆಯಿಂದ ಈ ಪರೀಕ್ಷೆ ನಡೆಸಲು ಈಗಾಗಲೇ ಕೋರಲಾಗಿದೆ. ಆರೋಪಿತರೆಂದು ಧೃಡಪಟ್ಟ ಕೂಡಲೇ ಅವರನ್ನು ಬಂಧಿಸಲಾಗುವುದು.

ಈ. ನಾರ್ಕೋ ಅನಾಲಿಸಿಸ್ ಪರೀಕ್ಷೆ ನಡೆಸಿ ಅದರ ವರದಿ ಬಂದ ನಂತರ ಈ ಪ್ರಕರಣದ ತನಿಖೆಯನ್ನು ಪೂರ್ಣಗೊಳಿಸಲಾಗುವುದು.